# ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ಅಧಿನಿಯಮ, 1986

## ಪ್ರಕರಣಗಳ ಕ್ರಮ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ


**ಪ್ರಕರಣಗಳು:**

### ಅಧ್ಯಾಯ I

### ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.


### ಅಧ್ಯಾಯ II

### ಮೀನು ಹಿಡಿಯುವುದರ ವಿನಿಯಮನ


3. ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಕೆಲವು ವಿಷಯಗಳನ್ನು ವಿನಿಯಮಿಸಲು, ನಿರ್ಬಂಧಿಸಲು ಅಥವಾ ನಿಷೇಧಿಸಲು ಅಧಿಕಾರ.
4. 3ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿ ಮೀನು ಹಿಡಿಯುವ ನೌಕೆಯನ್ನು ಬಳಸುವುದರ ನಿಷೇಧ.
5. ಮೀನು ಹಿಡಿಯುವ ನೌಕೆಗಳಿಗೆ ಲೈಸೆನ್ಸ್ ನೀಡಿಕೆ.
6. ಲೈಸೆನ್ಸ್ ಇರದ ಮೀನು ಹಿಡಿಯುವ ನೌಕೆಗಳನ್ನು ಬಳಸಿ ಮೀನು ಹಿಡಿಯುವುದರ ನಿಷೇಧ.
7. ಲೈಸೆನ್ಸಿನ ರದ್ದಿಯಾತಿ, ನಿಲಂಬನ ಮತ್ತು ತಿದ್ದುಪಡಿ.
8. ನೌಕೆಗಳ ನೋಂದಣಿ.
9. 5, 7 ಮತ್ತು 8ನೇ ಪ್ರಕರಣಗಳ ಅಡಿಯಲ್ಲಿಯ ಆದೇಶಗಳ ಅಂತಿಮತೆ.
10. ಅಪೀಲುಗಳು.


### ಅಧ್ಯಾಯ III

### ದಂಡಗಳು


11. ಮೀನು ಹಿಡಿಯುವ ನೌಕೆಯನ್ನು ಪ್ರವೇಶಿಸುವ ಮತ್ತು ಶೋಧಿಸುವ ಅಧಿಕಾರ.
12. ಮಧ್ಯಸ್ಥ ನಿರ್ಣಯ.
13. ದಂಡ.
14. ಅಪೀಲು ವಿಚಾರಕ ಮಂಡಲಿಯ ರಚನೆ ಮತ್ತು ಅಪೀಲು ವಿಚಾರಕ ಮಂಡಲಿಗೆ ಅಪೀಲು ಸಲ್ಲಿಸುವುದು.
15. ಅಪೀಲು ವಿಚಾರಕ ಮಂಡಲಿಯಿಂದ ಪರಿಷ್ಕರಣೆ.
16. ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಗಾರರ ಮತ್ತು ಅಪೀಲು ವಿಚಾರಕ ಮಂಡಲಿಯ ಅಧಿಕಾರಗಳು.
17. ಸಲಹಾ ಸಮಿತಿ.
18. ಕಂಪನಿಗಳಿಂದ ಉಲ್ಲಂಘನೆಗಳು.

## ಅಧ್ಯಾಯ IV

### ಸಂಕೀರ್ಣ

19. ವಿನಾಯಿತಿ.

20. ಅಧಿಕಾರಗಳ ಪ್ರತ್ಯಾಯೋಜನೆ.

21. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.

22. ನಿಯಮಗಳ ರಚನಾಧಿಕಾರ.

* * * *

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1986ರ ಅಧಿನಿಯಮ ಸಂಖ್ಯೆ 24.**– ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಬಲೆದೋಣಿ, ಮೀನು ಹಿಡಿಯುವ ಬಲೆ ಚೀಲ ಮತ್ತು ಕಿವಿರುಬಲೆ ಮುಂತಾದ ಯಾಂತ್ರಿಕೃತ ವಸ್ತುಗಳನ್ನು ಬಳಸುವುದರಿಂದ ಕಡಲು ಮೀನುಗಾರಿಕೆ ಚಟುವಟಿಕೆಗಳು ಹೆಚ್ಚಿವೆ. ಇದರ ಜೊತೆಗೆ ಯಾಂತ್ರೀಕೃತವಲ್ಲದ ಪರಂಪರಾಗತ ದೋಣಿಗಳನ್ನು ಬಳಸಿ ಬೆಸ್ತರು ಮೀನುಗಾರಿಕೆಯನ್ನು ಮುಂದುವರಿಸುತ್ತಿದ್ದಾರೆ. ಪರಂಪರಾಗತ ದೋಣಿಗಳನ್ನು ಬಳಸುವ ಬೆಸ್ತರ ಹಿತಾಸಕ್ತಿಗಳನ್ನು ರಕ್ಷಿಸುವ ಮತ್ತು ಅವರ ಹಾಗೂ ಯಾಂತ್ರೀಕೃತ ದೋಣಿಗಳ ಮಾಲೀಕರ ನಡುವಿನ ಘರ್ಷಣೆಗಳನ್ನು ತಡೆಗಟ್ಟುವ ದೃಷ್ಟಿಯಿಂದ ಮತ್ತು ನಮ್ಮ ರಾಜ್ಯದ ಕಡಲ ತೀರ ಮಾರ್ಗಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಮೀನು ಹಿಡಿಯುವ ಚಟುವಟಿಕೆಗಳನ್ನು ಕ್ರಮಗೊಳಿಸುವ ಮತ್ತು ಮೀನುಗಾರಿಕೆಯಲ್ಲಿ ತೊಡಗಿದ ವಿವಿಧ ವರ್ಗಗಳ ವ್ಯಕ್ತಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಮತ್ತು ಮತ್ಸ್ಯ ಸಂಪತ್ತನ್ನು ಸಂರಕ್ಷಿಸುವ ಉದ್ದೇಶದಿಂದಲೂ ಸಹ ಈ ವಿಧೇಯಕವನ್ನು ಮಂಡಿಸಲು ಪ್ರಸ್ತಾವಿಸಲಾಗಿದೆ. ಇತರ ವಿಷಯಗಳೊಂದಿಗೆ ಈ ವಿಧೇಯಕವು,–

(1) ಮೀನುಗಾರಿಕೆಯಲ್ಲಿ ತೊಡಗಿರುವ ಮೀನು ಹಿಡಿಯುವ ನೌಕೆಗಳ ಕಡ್ಡಾಯ ನೋಂದಣಿಗಾಗಿ ಮತ್ತು ಲೈಸೆನ್ಸ್ ಗಳು ಮುಂತಾದವುಗಳ ನೀಡಿಕೆಗಾಗಿ;

(2) ವಿವಿಧ ರೀತಿಯ ಮೀನು ಹಿಡಿಯುವ ನೌಕೆಗಳಿಗೆ ಮೀನುಗಾರಿಕೆ ವಲಯಗಳ ಎಲ್ಲೆಯನ್ನು ಗೊತ್ತುಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದಕ್ಕಾಗಿ;

(3) ಪ್ರಕರಣದ ವಿವಿಧ ಉಪಬಂಧಗಳ ಅಡಿಯಲ್ಲಿ ಹೊರಡಿಸಲಾದ ಯಾವುವೇ ಆದೇಶಗಳ ಉಲ್ಲಂಘನೆಗೆ ದಂಡ ವಿಧಿಸುವುದಕ್ಕಾಗಿ,

–ಉಪಬಂಧವನ್ನು ಕಲ್ಪಿಸುತ್ತದೆ.

ಆದ್ದರಿಂದ ಈ ವಿಧೇಯಕ.

(ವಿಧಾನಸಭಾ ವಿಧೇಯಕ 1986ರ ಕ್ರಮ ಸಂಖ್ಯೆ 6ರಲ್ಲಿದ್ದಂತೆ)

* * * *

# 1986ರ ಕರ್ನಾಟಕ ಅಧಿನಿಯಮ ಸಂಖ್ಯೆ 24

*(1986ರ ಮೇ 28ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ಅಧಿನಿಯಮ, 1986

*(1986ರ ಮೇ 22ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)*

**ರಾಜ್ಯದ ಕರಾವಳಿಯುದ್ದಕ್ಕೂ ಕಡಲಿನಲ್ಲಿ ಮೀನು ಹಿಡಿಯುವ ನೌಕೆಗಳ ಮೂಲಕ ಮೀನು ಹಿಡಿಯುವುದನ್ನು ವಿನಿಯಮಿಸುವುದಕ್ಕೆ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ರಾಜ್ಯದ ಕರಾವಳಿಯುದ್ದಕ್ಕೂ ಕಡಲಿನಲ್ಲಿ ಮೀನು ಹಿಡಿಯುವ ನೌಕೆಗಳ ಮೂಲಕ ಮೀನು ಹಿಡಿಯುವುದನ್ನು ವಿನಿಯಮಿಸುವುದಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವೆಂದು ಕಂಡು ಬಂದಿರುವುದರಿಂದ;

ಇದು, ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಡಲ ಮೀನುಗಾರಿಕೆ (ವಿನಿಯಮನ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು ಅಧಿಸೂಚಿಸಬಹುದಾದಂಥ [1][ದಿನಾಂಕದಿಂದ][1] ಜಾರಿಯಲ್ಲಿ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಮೂಲಕ ದಿ: 18.8.1986ರಿಂದ ಜಾರಿಗೊಂಡಿದೆ.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಧ್ಯಸ್ಥಗಾರ" ಎಂದರೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ ಅಥವಾ ಪ್ರದೇಶಗಳಿಗಾಗಿ ಈ ಅಧಿನಿಯಮದ ಮೂಲಕ ಮಧ್ಯಸ್ಥಗಾರನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಪ್ರಾಧಿಕೃತಗೊಳಿಸಿದ ಮೀನುಗಾರಿಕೆ ಇಲಾಖೆಯ ಉಪ-ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿ;

(ಬಿ) "ಅಪೀಲು ವಿಚಾರಕ ಪ್ರಾಧಿಕಾರ" ಎಂದರೆ, ಸರ್ಕಾರವು ಅಧಿಸೂಚನೆಯ ಮೂಲಕ ನೇಮಿಸಲಾದ ಒಂದು ಅಪೀಲು ವಿಚಾರಕ ಪ್ರಾಧಿಕಾರ;

(ಸಿ) "ಅಪೀಲು ವಿಚಾರಕ ಮಂಡಲಿ" ಎಂದರೆ, 15ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಅಪೀಲು ವಿಚಾರಕ ಮಂಡಲಿ;

(ಡಿ) "ಪ್ರಾಧಿಕೃತ ಅಧಿಕಾರಿ" ಎಂದರೆ, ಪ್ರಾಧಿಕೃತ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಪ್ರಾಧಿಕೃತಗೊಳಿಸಿದ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿ;

(ಇ) "ಮೀನು ಹಿಡಿಯುವ ನೌಕೆ" ಎಂದರೆ, ಯಂತ್ರಚಾಲಿತ ಸಾಧನಗಳನ್ನು ಜೋಡಿಸಿರುವ ಅಥವಾ ಜೋಡಿಸಿರದ ಮತ್ತು ಲಾಭಕ್ಕಾಗಿ ಕಡಲ ಮೀನು ಹಿಡಿಯುವ ಕೆಲಸವೊಂದರಲ್ಲಿ ಮಾತ್ರವೇ ತೊಡಗಿರುವ

ಹಡಗು ಅಥವಾ ದೋಣಿ ಮತ್ತು ಕಡಲಿನಲ್ಲಿ ಮೀನು ಹಿಡಿಯುವ ಕೆಲಸದಲ್ಲಿ ತೊಡಗಿರುವ ನಾಡುದೋಣಿ ಮತ್ತು ತೋಡುದೋಣಿಯೂ ಸೇರುತ್ತದೆ;

(ಎಫ್) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(ಜಿ) "ಬಂದರು" ಎಂದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆಗಿಂದಾಗ್ಗೆ ಪರಿಭಾಷಿಸಬಹುದಾದ ಅಂಥ ಪರಿಮಿತಿಗಳೊಳಗಿನ ಸ್ಥಳ;

(ಹೆಚ್) "ನೋಂದಾಯಿತ ಮೀನು ಹಿಡಿಯುವ ನೌಕೆ" ಎಂದರೆ,-

(i) ಕಡಲ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1971ರ (ಕೇಂದ್ರಾಧಿನಿಯಮ 1972ರ 13) 11ನೇ ಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ ಒಂದು ಮೀನು ಹಿಡಿಯುವ ನೌಕೆ ; ಅಥವಾ

(ii) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಒಂದು ಮೀನು ಹಿಡಿಯುವ ನೌಕೆ; ಅಥವಾ

(iii) 8ನೇ ಪ್ರಕರಣ ಅಡಿಯಲ್ಲಿ ನೋಂದಾಯಿಸಲಾದ ಒಂದು ಮೀನು ಹಿಡಿಯುವ ನೌಕೆ;

(ಐ) "ನಿರ್ದಿಷ್ಟಪಡಿಸಿದ ಪ್ರದೇಶ" ಎಂದರೆ, ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂತೆ ರಾಜ್ಯದ ಕರಾವಳಿಯುದ್ದಕ್ಕೂ ಇರುವ ಆದರೆ ರಾಜ್ಯ ಕ್ಷೇತ್ರೀಯ ಸಮುದ್ರದ ಆಚೆಯಿರದ ಸಮುದ್ರದಲ್ಲಿನ ಅಂಥ ಪ್ರದೇಶ ಮತ್ತು ವಿವಿಧ ಉದ್ದೇಶಗಳಿಗಾಗಿ ಅಥವಾ ಬೇರೆ ಬೇರೆ ಅವಧಿಗಳಿಗಾಗಿ ಪ್ರದೇಶಗಳನ್ನು ನಿರ್ದಿಷ್ಟ ಪಡಿಸಬಹುದು;

(ಜೆ) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ ಮತ್ತು ಆ ರಾಜ್ಯದ ಕರಾವಳಿಯುದ್ದಕ್ಕೂ ಇರುವ ರಾಜ್ಯ ಕ್ಷೇತ್ರೀಯ ಸಮುದ್ರವನ್ನು ಒಳಗೊಳ್ಳುತ್ತದೆ.

## ಅಧ್ಯಾಯ II

## ಮೀನು ಹಿಡಿಯುವುದರ ವಿನಿಯಮನ

**3. ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಕೆಲವು ವಿಷಯಗಳನ್ನು ವಿನಿಯಮಿಸಲು, ನಿರ್ಬಂಧಿಸಲು ಅಥವಾ ನಿಷೇಧಿಸಲು ಅಧಿಕಾರ.**- (1) ಸರ್ಕಾರವು, (2) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಅಧಿಸೂಚನೆಯ ಮೂಲಕ,-

(ಎ) ವಿಯಮಿಸಬಹುದಾದ ಮೀನು ಹಿಡಿಯುವ ನೌಕೆಗಳ ಅಂಥ ವರ್ಗ ಅಥವಾ ವರ್ಗಗಳಿಂದ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಮೀನು ಹಿಡಿಯುವುದನ್ನು; ಅಥವಾ

(ಬಿ) ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಮೀನು ಹಿಡಿಯಲು ಉಪಯೋಗಿಸಬಹುದಾದ ಮೀನು ಹಿಡಿಯುವ ನೌಕೆಗಳ ಸಂಖ್ಯೆಯನ್ನು ; ಅಥವಾ

(ಸಿ) ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಜಾತಿಗಳ ಮೀನುಗಳನ್ನು ಅಂಥ ಅವಧಿಯವರೆಗೆ ಹಿಡಿಯುವುದನ್ನು ; ಅಥವಾ

(ಡಿ) ನಿಯಮಿಸಬಹುದಾದ ಅಂಥ ಮೀನು ಹಿಡಿಯುವ ಸಲಕರಣೆಗಳನ್ನು ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಬಳಸುವುದನ್ನು,

-ವಿನಿಯಮಿಸಬಹುದು, ನಿರ್ಬಂಧಿಸಬಹುದು ಅಥವಾ ನಿಷೇಧಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವಲ್ಲಿ, ಸರ್ಕಾರವು ಈ ಮುಂದಿನ ವಿಷಯಗಳನ್ನು ಗಮನದಲ್ಲಿಡತಕ್ಕದ್ದು, ಎಂದರೆ:-

(ಎ) ಮೀನು ಹಿಡಿಯುವ ಕೆಲಸದಲ್ಲಿ ತೊಡಗಿರುವ ಅದರಲ್ಲೂ ವಿಶೇಷವಾಗಿ ನಾಡುದೋಣಿ ಅಥವಾ ತೋಡುದೋಣಿ ಮುಂತಾದ ಪರಂಪರಾಗತ ಮೀನು ಹಿಡಿಯುವ ದೋಣಿಗಳನ್ನು ಬಳಸಿ ಮೀನು ಹಿಡಿಯುವುದರಲ್ಲಿ ತೊಡಗಿರುವ ವಿವಿಧ ವರ್ಗಗಳ ಜನರ ಹಿತಾಸಕ್ತಿಗಳನ್ನು ರಕ್ಷಿಸುವ ಅವಶ್ಯಕತೆ;

(ಬಿ) ವೈಜ್ಞಾನಿಕ ಆಧಾರದ ಮೇಲೆ ಮೀನನ್ನು ಸಂರಕ್ಷಿಸುವುದನ್ನು ಮತ್ತು ಮೀನು ಹಿಡಿಯುವುದನ್ನು ವಿನಿಯಮಿಸುವ ಅವಶ್ಯಕತೆ;

(ಸಿ) ಕಡಲಿನಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ಅವಶ್ಯಕತೆ; ಮತ್ತು

(ಡಿ) ನಿಯಮಿಸಬಹುದಾದ ಅಂಥ ಇತರ ಯಾವುದೇ ವಿಷಯ.

**4. 3ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿ ಮೀನು ಹಿಡಿಯುವ ನೌಕೆಯನ್ನು ಬಳಸುವುದರ ನಿಷೇಧ.–** ಮೀನು ಹಿಡಿಯುವ ನೌಕೆಯ ಮಾಲೀಕ ಅಥವಾ ಯಜಮಾನನೂ ಸೇರಿದಂತೆ ಯಾವೊಬ್ಬ ವ್ಯಕ್ತಿಯೂ 3ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶವನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿ ಮೀನು ಹಿಡಿಯುವುದಕ್ಕೆ ಅಂಥ ಮೀನು ಹಿಡಿಯುವ ನೌಕೆಯನ್ನು ಬಳಸತಕ್ಕದಲ್ಲ ಅಥವಾ ಬಳಸುವಂತೆ ಮಾಡತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅಂಥ ಆದೇಶದಲ್ಲಿರುವುದಾವುದೂ, ಅಂಥ ಇತರ ಯಾವುದೇ ಪ್ರದೇಶದಲ್ಲಿ ಮೀನು ಹಿಡಿಯುವ ಉದ್ದೇಶಕ್ಕಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಮೀನು ಹಿಡಿಯುವ ನೌಕೆಯು ತೀರದಿಂದ ಅಥವಾ ತೀರಕ್ಕೆ ಯಾವುದೇ ನಿರ್ದಿಷ್ಟಪಡಿಸಲಾದ ಪ್ರದೇಶದ ಮೂಲಕ ನಿರ್ದಿಷ್ಟಪಡಿಸಲಾದ ಪ್ರದೇಶವನ್ನುಳಿದು, ಇತರ ಯಾವುದೇ ಪ್ರದೇಶಕ್ಕೆ ಹೋಗುವುದನ್ನು ಅಥವಾ ಅಲ್ಲಿಂದ ತೀರಕ್ಕೆ ಬರುವುದನ್ನು ಅಡ್ಡಿಪಡಿಸುವುದೆಂದು ಅರ್ಥೈಸತಕ್ಕದ್ದಲ್ಲ:

ಮತ್ತು ಪರಂತು, ಅಂಥ ಮೀನು ಹಿಡಿಯುವ ನೌಕೆಯು ಯಾವುದೇ ನಿರ್ದಿಷ್ಟಪಡಿಸಿದ ಪ್ರದೇಶದ ಮೂಲಕ ಹೋಗುವಾಗ ಯಾವುದೇ ಮೀನು ಹಿಡಿಯುವ ನೌಕೆಯನ್ನು ಬಳಸಿ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಮೀನು ಹಿಡಿಯುವುದರಲ್ಲಿ ತೊಡಗುವ ಯಾವೊಬ್ಬ ವ್ಯಕ್ತಿಗೆ ಸೇರಿದ ಯಾವುದೇ ಮೀನು ಬಲೆಗಾಗಲಿ ಅಥವಾ ಗಾಳ ಮುಂತಾದವುಗಳಿಗಾಗಲಿ ಯಾವುದೇ ರೀತಿಯಲ್ಲಿ ಯಾವುದೇ ಹಾನಿಯನ್ನುಂಟುಮಾಡತಕ್ಕದ್ದಲ್ಲ.

**5. ಮೀನು ಹಿಡಿಯುವ ನೌಕೆಗಳಿಗೆ ಲೈಸೆನ್ಸ್ ನೀಡಿಕೆ.–** (1) ನೋಂದಾಯಿತ ಮೀನು ಹಿಡಿಯುವ ನೌಕೆಯ ಮಾಲೀಕನು, ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಮೀನು ಹಿಡಿಯುವುದಕ್ಕಾಗಿ ಅಂಥ ಮೀನು ಹಿಡಿಯುವ ನೌಕೆಯನ್ನು ಬಳಸಲು ಲೈಸೆನ್ಸ್ ಪಡೆಯುವುದಕ್ಕಾಗಿ, ಪ್ರಾಧಿಕೃತ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿಯ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದ ಅಂಥ ಪ್ರಪತ್ರದಲ್ಲಿರತಕ್ಕದ್ದು ಮತ್ತು ಅಂಥ ವಿವರಗಳನ್ನೊಳಗೊಂಡಿರತಕ್ಕದ್ದು ಹಾಗೂ ಅಂಥ ಶುಲ್ಕವನ್ನು ಅದರೊಂದಿಗೆ ಸಂದಾಯ ಮಾಡತಕ್ಕದ್ದು.

(3) ಪ್ರಾಧಿಕೃತ ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಮತ್ತು (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಅಂಥ ಲೈಸೆನ್ಸ್‌ನಲ್ಲಿ ನಮೂದಿಸಲಾಗಿರುವ ನಿರ್ದಿಷ್ಟ ಪ್ರದೇಶ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಮೀನು ಹಿಡಿಯಲು ಅಂಥ ಮೀನು ಹಿಡಿಯುವ ನೌಕೆಯನ್ನು ಉಪಯೋಗಿಸುವುದಕ್ಕಾಗಿ ನೋಂದಾಯಿತ ಮೀನು ಹಿಡಿಯುವ ನೌಕೆಯ ಮಾಲೀಕನಿಗೆ ಲೈಸೆನ್ಸ್ ನೀಡಬಹುದು ಇಲ್ಲವೆ ನಿರಾಕರಿಸಬಹುದು.

(4) (3)ನೇ ಉಪ-ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ನೀಡುವಾಗ ಅಥವಾ ನಿರಾಕರಿಸುವಾಗ, ಪ್ರಾಧಿಕೃತ ಅಧಿಕಾರಿಯು ಈ ಮುಂದಿನ ವಿಷಯಗಳನ್ನು ಗಮನಿಸತಕ್ಕದ್ದು, ಎಂದರೆ:-

(ಎ) ಮೀನು ಹಿಡಿಯುವ ನೌಕೆಗೆ ಜೋಡಿಸಲಾದ ಸಾಧನ ಸಾಮಗ್ರಿಗಳು ಮತ್ತು ಮೀನು ಹಿಡಿಯುವ ಉಪಕರಣಗಳೂ ಸೇರಿದಂತೆ ಮೀನು ಹಿಡಿಯುವ ನೌಕೆಯ ಸ್ಥಿತಿ;

(ಬಿ) 3ನೇ ಪ್ರಕರಣದ ಅಡಿಯಲ್ಲಿ ಮಾಡಬಹುದಾದ ಯಾವುದೇ ಆದೇಶ;

(ಸಿ) ನಿಯಮಿಸಬಹುದಾದ ಇತರ ಯೂವುವೇ ವಿಷಯ.

(5) ಈ ಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸು, ನಿಯಮಿಸಬಹುದಾದ ಅಂಥ ಶುಲ್ಕ ಸಂದಾಯದ ಬಗೆಗಿನ ಷರತ್ತುಗಳು ಮತ್ತು ಷರತ್ತುಗಳ ಯಥಾ ಪಾಲನೆಗಾಗಿ ಅಂಥ ಭದ್ರತೆಯನ್ನು ಒದಗಿಸುವುದೂ ಸೇರಿದಂತೆ ನಿಯಮಿಸಬಹುದಾದ ಅಂಥ ಪ್ರಪತ್ರದಲ್ಲಿರತಕ್ಕದ್ದು ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು:

ಪರಂತು, ಮೀನು ಹಿಡಿಯುವ ನೌಕೆಗಳ ವಿವಿಧ ವರ್ಗಗಳಿಗೆ ಲೈಸೆನ್ಸು ನೀಡುವ ಸಂಬಂಧದಲ್ಲಿ ಭದ್ರತಾ ರೂಪದಲ್ಲಿ ವಿವಿಧ ಶುಲ್ಕಗಳನ್ನು ಮತ್ತು ಬೇರೆ ಬೇರೆ ಮೊಬಲಗುಗಳನ್ನು ನಿಯಮಿಸಬಹುದು.

(6) ಈ ಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸು ಮೂರು ವರ್ಷಗಳ ಅವಧಿಯವರೆಗೆ ಮಾನ್ಯವಾಗಿರತಕ್ಕದ್ದು ಮತ್ತು (5)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶುಲ್ಕವನ್ನು ಸಂದಾಯ ಮಾಡಿ ಅಷ್ಟೇ ಅವಧಿಗೆ ನವೀಕರಿಸಿಕೊಳ್ಳಬಹುದು.

**6. ಲೈಸೆನ್ಸ್ ಇರದ ಮೀನು ಹಿಡಿಯುವ ನೌಕೆಗಳನ್ನು ಬಳಸಿ ಮೀನು ಹಿಡಿಯುವುದರ ನಿಷೇಧ.**- ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾದ ಅನಂತರ, 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ಹೊಂದಿಲ್ಲದ ಮೀನು ಹಿಡಿಯುವ ನೌಕೆಯನ್ನು ಬಳಸಿ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಮೀನು ಹಿಡಿಯುವ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಮೀನು ಹಿಡಿಯುವುದಕ್ಕಾಗಿ ಬಳಸುತ್ತಿದ್ದ ಯಾವುದೇ ಮೀನು ಹಿಡಿಯುವ ನೌಕೆಗೆ, ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದಿಷ್ಟಪಡಿಸುವ ಅಂಥ ಅವಧಿಯವರೆಗೆ ಅನ್ವಯಿಸತಕ್ಕದ್ದಲ್ಲ.

**7. ಲೈಸೆಸ್ಸಿನ ರದ್ದಿಯಾತಿ, ನಿಲಂಬನ ಮತ್ತು ತಿದ್ದುಪಡಿ.**- (1) ಪ್ರಾಧಿಕೃತ ಅಧಿಕಾರಿಗೆ,-

(ಎ) 5ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸನ್ನು ಅತ್ಯವಶ್ಯಕ ವಿಷಯಕ್ಕೆ ಸಂಬಂಧಿಸಿದಂತೆ ತಪ್ಪು ನಿರೂಪಣೆಯನ್ನು ಮಾಡುವ ಮೂಲಕ ಪಡೆಯಲಾಗಿದೆಯೆಂದು; ಅಥವಾ

(ಬಿ) ಲೈಸೆನ್ಸ್ ಧಾರಕನು, ಯಾವ ಷರತ್ತುಗಳಿಗೊಳಪಟ್ಟು ಲೈಸೆನ್ಸನ್ನು ನೀಡಲಾಗಿತ್ತೊ ಆ ಷರತ್ತುಗಳನ್ನು ಪಾಲಿಸುವಲ್ಲಿ ಸೂಕ್ತ ಕಾರಣವಿಲ್ಲದೆ ತಪ್ಪಿದ್ದಾನೆಂದು ಅಥವಾ ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮವನ್ನು ಉಲ್ಲಂಘಿಸಿದ್ದಾನೆಂದು,

- ಈ ಸಂಬಂಧವಾಗಿ ಮಾಡಿದ ಉಲ್ಲೇಖದಿಂದ ಅಥವಾ ಅನ್ಯಥಾ ಮನದಟ್ಟಾದರೆ ಕಾರಣಗಳನ್ನು ತಿಳಿಸಲು ಲೈಸೆನ್ಸ್‌ಧಾರಕನಿಗೆ ಸೂಕ್ತ ಅವಕಾಶವನ್ನು ನೀಡಿದ ಅನಂತರ ಪ್ರಾಧಿಕೃತ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್ ಧಾರಕನು ಬದ್ಧನಾಗಿರಬಹುದಾದ ಯಾವುದೇ ಇತರ ದಂಡಕ್ಕೆ ಬಾಧಕವಾಗದಂತೆ, ಲೈಸೆನ್ಸ್ ರದ್ದುಗೊಳಿಸಬಹುದು ಅಥವಾ ತಡೆ ಹಿಡಿಯಬಹುದು ಅಥವಾ ಲೈಸೆನ್ಸ್‌ನ್ನು ಯಾವ ಷರತ್ತುಗಳಿಗೊಳಪಟ್ಟು ನೀಡಲಾಗಿತ್ತೋ ಆ ಷರತ್ತುಗಳ ಯಥೋಚಿತ ಪಾಲನೆಗೊಳಪಟ್ಟು ಒದಗಿಸಲಾದ ಭದ್ರತೆಯ ಪೂರ್ಣ ಭಾಗವನ್ನು ಅಥವಾ ಅದರ ಯಾವುದೇ ಭಾಗವನ್ನು ಮುಟ್ಟುಗೋಲು ಹಾಕಬಹುದು.

(2) ಈ ಸಂಬಂಧದಲ್ಲಿ ಮಾಡಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ಪ್ರಾಧಿಕೃತ ಅಧಿಕಾರಿಯು 5ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಲೈಸೆನ್ಸನ್ನು ವ್ಯತ್ಯಾಸಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

**8. ನೌಕೆಗಳ ನೋಂದಣಿ.**- (1) ಕಡಲು ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1972ರ (1972ರ ಕೇಂದ್ರಾಧಿನಿಯಮ 13) 11ನೇ ಪ್ರಕರಣದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ

ಯಾವುದೇ ಇತರ ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಮೀನು ಹಿಡಿಯುವ ನೌಕೆಯಲ್ಲದ, ಆದರೆ ಮೀನು ಹಿಡಿಯುವ ಉದ್ದೇಶಗಳಿಗಾಗಿ ಬಳಸಲಾದ ಅಥವಾ ಬಳಸಲು ಉದ್ದೇಶಿಸಲಾದ ಮತ್ತು ರಾಜ್ಯದಲ್ಲಿ ಇಡಲಾದ ಪ್ರತಿಯೊಂದು ನೌಕೆಯ ಮಾಲೀಕನು ಅಂಥ ನೌಕೆಯನ್ನು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸತಕ್ಕದ್ದು.

(2) ಅಂಥ ನೌಕೆಯನ್ನು ನೋಂದಾಯಿಸುವುದಕ್ಕಾಗಿ ಸಲ್ಲಿಸಬೇಕಾದ ಪ್ರತಿಯೊಂದು ಅರ್ಜಿಯನ್ನು ಅಂಥ ನೌಕೆಯ ಮಾಲೀಕನು,-

(ಎ) ಮೊಟ್ಟಮೊದಲು ಅಂಥ ನೌಕೆಯ ಮಾಲೀಕನಾದ ದಿನಾಂಕದಿಂದ ಎರಡು ತಿಂಗಳ ಅವಧಿಯ ಮುಕ್ತಾಯ; ಅಥವಾ

(ಬಿ) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ 6 ತಿಂಗಳ ಅವಧಿಯ ಮುಕ್ತಾಯ,

- ಇವೆರಡರಲ್ಲಿ ಯಾವುದು ತರುವಾಯವೋ ಅದಕ್ಕೆ ಮುಂಚಿತವಾಗಿ ನಿಯಮಿಸಬಹುದಾದಂಥ ಪ್ರಪತ್ರದಲ್ಲಿ ಮತ್ತು ನಿಯಮಿಸಬಹುದಾದಂಥ ಶುಲ್ಕದೊಂದಿಗೆ ಪ್ರಾಧಿಕೃತ ಅಧಿಕಾರಿಗೆ ಸಲ್ಲಿಸತಕ್ಕದ್ದು:

ಪರಂತು, ಅರ್ಜಿ ಸಲ್ಲಿಸಲು ಇರುವ ಕಾಲಮಿತಿಯನ್ನು ಪ್ರಾಧಿಕೃತ ಅಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದರೆ ಒಂದು ವರ್ಷಕ್ಕೆ ಮೀರದಂಥ ಅವಧಿಯವರೆಗೆ ಸಾಕಷ್ಟು ಕಾರಣವನ್ನು ಲಿಖಿತದಲ್ಲಿ ಅಭಿಲೇಖಿಸಿ ವಿಸ್ತರಿಸಬಹುದು.

(3) ಪ್ರಾಧಿಕೃತ ಅಧಿಕಾರಿಯು ತಾನು ನೋಂದಾಯಿಸಿರುವ ನೌಕೆಯ ಮಾಲೀಕನಿಗೆ ನಿಯಮಿಸಲಾದ ಪ್ರಪತ್ರದಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ತನ್ನ ಬಳಿ ಇರುವ ರಿಜಿಸ್ಟರಿನಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಪ್ರಮಾಣಪತ್ರದ ವಿವರಗಳನ್ನು ನಮೂದಿಸತಕ್ಕದ್ದು.

(4) ಒಮ್ಮೆ ನೋಂದಾಯಿಸಿದ ಮೇಲೆ, (7)ನೇ ಉಪ-ಪ್ರಕರಣಕ್ಕೊಳಪಟ್ಟು ಪ್ರಾಧಿಕೃತ ಅಧಿಕಾರಿಯಿಂದ ಅದು ರದ್ದಾಗುವವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ನೋಂದಾಯಿತ ನೌಕೆಯು, ಪ್ರಾಧಿಕೃತ ಅಧಿಕಾರಿಯು ಕೊಟ್ಟಿರುವ ನೋಂದಣಿ ಗುರುತನ್ನು ಹೊಂದಿದ್ದು, ಅದು, ನಿಯಮಿಸಲಾದ ರೀತಿಯಲ್ಲಿ ಎದ್ದು ಕಾಣುವಂತಿರತಕ್ಕದ್ದು.

(6) ನೋಂದಾಯಿತ ಮೀನು ಹಿಡಿಯುವ ನೌಕೆಯಲ್ಲದ ಇತರ ಯಾವುದೇ ನೌಕೆಯು 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸನ್ನು ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

(7) ನೋಂದಾಯಿತ ಮೀನು ಹಿಡಿಯುವ ನೌಕೆಯ ಮಾಲೀಕತ್ವವನ್ನು ವರ್ಗಾಯಿಸಿರುವಲ್ಲಿ, ಅಂಥ ವರ್ಗಾವಣೆಯನ್ನು ಪಡೆದವನು (2)ನೇ ಉಪ-ಪ್ರಕರಣದ ಅಡಿಯಲ್ಲಿ ನೌಕೆಯನ್ನು ಹೊಸದಾಗಿ ನೋಂದಾಯಿಸತಕ್ಕದ್ದು.

**9. 5, 7 ಮತ್ತು 8ನೇ ಪ್ರಕರಣಗಳ ಅಡಿಯಲ್ಲಿಯ ಆದೇಶಗಳ ಅಂತಿಮತೆ.-** 5ನೇ ಪ್ರಕರಣ, 7ನೇ ಪ್ರಕರಣ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಮೀನು ಹಿಡಿಯುವ ನೌಕೆಗೆ ಲೈಸೆನ್ಸಿನ ಮಂಜೂರಾತಿಗೆ ಅನುಮತಿಸುವ ಅಥವಾ ನಿರಾಕರಿಸುವ ಅಥವಾ ಅಂಥ ಲೈಸೆನ್ಸನ್ನು ರದ್ದುಗೊಳಿಸುವ, ತಡೆ ಹಿಡಿಯುವ, ಬದಲಾಯಿಸುವ, ಅಥವಾ ತಿದ್ದುಪಡಿ ಮಾಡುವ ಅಥವಾ ಮೀನು ಹಿಡಿಯುವ ನೌಕೆಯನ್ನು ನೋಂದಾಯಿಸುವ ಅಥವಾ ನೋಂದಣಿಯನ್ನು ರದ್ದುಪಡಿಸುವ ಬಗೆಗಿನ ಪ್ರಾಧಿಕೃತ ಅಧಿಕಾರಿಯ ಪ್ರತಿಯೊಂದು ತೀರ್ಮಾನವು, 10ನೇ ಪ್ರಕರಣದ ಅಡಿಯಲ್ಲಿ ಯಾವುದೇ ಅಪೀಲೀಯ ಹಕ್ಕಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**10. ಅಪೀಲುಗಳು.-** (1) ಮೀನು ಹಿಡಿಯುವ ನೌಕೆಗೆ, ಲೈಸೆನ್ಸ್ ನೀಡಿಕೆಯನ್ನು ನಿರಾಕರಿಸುವ ಅಥವಾ ಅಂಥ ಲೈಸೆನ್ಸ್‌ನ್ನು ರದ್ದುಗೊಳಿಸುವ, ತಡೆಹಿಡಿಯುವ, ಬದಲಾಯಿಸುವ ಅಥವಾ ತಿದ್ದುಪಡಿ ಮಾಡುವ ಅಥವಾ ನೌಕೆಯನ್ನು ನೋಂದಾಯಿಸಲು ನಿರಾಕರಿಸುವ ಅಥವಾ ಅಂಥ ನೌಕೆಯ ನೋಂದಣಿಯನ್ನು

ರದ್ದುಗೊಳಿಸುವ ಪ್ರಾಧಿಕೃತ ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ತಾನು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಸದರಿ ಮೂವತ್ತು ದಿನಗಳ ಅವಧಿಯ ಮುಕ್ತಾಯದ ತರುವಾಯ, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಫೈಲು ಮಾಡದಿರುವುದಕ್ಕೆ ಸಾಕಷ್ಟು ಕಾರಣಗಳಿದ್ದುವೆಂದು ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅಪೀಲನ್ನು ಸ್ವೀಕರಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಪೀಲನ್ನು ಸ್ವೀಕರಿಸಿದ ತರುವಾಯ ಅಪೀಲು ಪ್ರಾಧಿಕಾರವು, ಅಹವಾಲು ಹೇಳಿಕೊಳ್ಳಲು ಅಪೀಲುದಾರನಿಗೆ ಒಂದು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ಆ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಅದೇಶಗಳನ್ನು ಆದಷ್ಟು ಬೇಗನೆ ಹೊರಡಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು ಹೊರಡಿಸಿದ ಪ್ರತಿಯೊಂದು ಆದೇಶವೂ ಅಂತಿಮವಾಗಿರತಕ್ಕದ್ದು.

## ಅಧ್ಯಾಯ III

## ದಂಡಗಳು

**11. ಮೀನು ಹಿಡಿಯುವ ನೌಕೆಯನ್ನು ಪ್ರವೇಶಿಸುವ ಮತ್ತು ಶೋಧಿಸುವ ಅಧಿಕಾರ.**- (1) ಪ್ರಾಧಿಕೃತ ಅಧಿಕಾರಿಗೆ, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮವನ್ನು ಅಥವಾ ಲೈಸೆನ್ಸಿನ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿ ಯಾವುದೇ ಮೀನು ಹಿಡಿಯುವ ನೌಕೆಯನ್ನು ಬಳಸಲಾಗುತ್ತಿದೆ ಅಥವಾ ಬಳಸಲಾಗಿತ್ತೆಂದು ನಂಬಲು ಕಾರಣವಿದ್ದರೆ, ಅಂಥ ನೌಕೆಯನ್ನು ಪ್ರವೇಶಿಸಿ ಶೋಧಿಸಬಹುದು ಮತ್ತು ಅಂಥ ನೌಕೆಯನ್ನು ವಶಕ್ಕೆ ತೆಗೆದುಕೊಂಡು ಅದರಲ್ಲಿದ್ದ ಯಾವುದೇ ಮೀನನ್ನು ಅಭಿಗ್ರಹಿಸಬಹುದು.

(2) ಪ್ರಾಧಿಕೃತ ಅಧಿಕಾರಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡ ಮೀನು ಹಿಡಿಯುವ ನೌಕೆಯನ್ನು, ನಿಯಮಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ರೀತಿಯಲ್ಲಿ ಇಡತಕ್ಕದ್ದು.

(3) ಅಭಿಗ್ರಹಿಸಲಾದ ಮೀನನ್ನು ದಾಸ್ತಾನು ಮಾಡುವುದಕ್ಕೆ ಸೂಕ್ತ ಸೌಲಭ್ಯಗಳು ಇಲ್ಲದಿದ್ದರೆ, ಅಂಥ ಮೀನನ್ನು ವಿಲೆ ಮಾಡುವುದು ಅಗತ್ಯವೆಂದು ಪ್ರಾಧಿಕೃತ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅಂಥ ಮೀನನ್ನು ವಿಲೆ ಮಾಡಿ ಅದರಿಂದ ಬಂದ ಉತ್ಪತ್ತಿಯನ್ನು ಮಧ್ಯಸ್ಥಗಾರರ ಕಛೇರಿಯಲ್ಲಿ ನಿಯಮಿಸಲಾದ ರೀತಿಯಲ್ಲಿ ಠೇವಣಿ ಇಡತಕ್ಕದ್ದು.

**12. ಮಧ್ಯಸ್ಥ ನಿರ್ಣಯ.**- (1) 11ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವೊಬ್ಬ ಪ್ರಾಧಿಕೃತ ಅಧಿಕಾರಿಗೆ, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮವನ್ನು ಅಥವಾ ಲೈಸೆನ್ಸಿನ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿ ಯಾವುದೇ ಮೀನು ಹಿಡಿಯುವ ನೌಕೆಯನ್ನು ಬಳಸಲಾಗುತ್ತಿದೆ ಅಥವಾ ಬಳಸಲಾಗಿತ್ತೆಂದು ನಂಬಲು ಕಾರಣವಿದ್ದರೆ, ಅವನು ಆ ಬಗ್ಗೆ ಮಧ್ಯಸ್ಥಗಾರನಿಗೆ ವರದಿ ಮಾಡತಕ್ಕದ್ದು.

(2) ಮಧ್ಯಸ್ಥಗಾರನು, ಸಂಬಂಧಪಟ್ಟ ಎಲ್ಲಾ ಪಕ್ಷಕಾರರಿಗೂ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ ವರದಿಯಲ್ಲಿ ನಮೂದಿಸಲಾದ ವಿಷಯಗಳ ಬಗ್ಗೆ ನಿಯಮಿಸಲಾದ ರೀತಿಯಲ್ಲಿ ವಿಚಾರಣೆ ನಡೆಸತಕ್ಕದ್ದು.

**13. ದಂಡ.**- (1) ಮಧ್ಯಸ್ಥಗಾರನು, 12ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ನಡೆಸಿದ ತರುವಾಯ, ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮವನ್ನು ಅಥವಾ ಲೈಸೆನ್ಸಿನ ಯಾವುವೇ ಷರತ್ತುಗಳನ್ನು ಉಲ್ಲಂಘಿಸಿ ಯಾವೊಬ್ಬ ವ್ಯಕ್ತಿಯು ಯಾವುದೇ ಮೀನು ಹಿಡಿಯುವ ನೌಕೆಯನ್ನು ಬಳಸಿದ್ದನೇ ಅಥವಾ ಬಳಸುವಂತೆ ಮಾಡಿದ್ದನೇ ಅಥವಾ ಬಳಸಲು

ಅವಕಾಶ ಮಾಡಿಕೊಟ್ಟಿದ್ದನೇ ಎಂಬುದರ ಬಗ್ಗೆ ತೀರ್ಮಾನಿಸತಕ್ಕದ್ದು ಮತ್ತು ಮಧ್ಯಸ್ಥಗಾರನಿಂದ ದೋಷಿ ಎಂದು ನಿರ್ಣಯಿಸಲಾದಂಥ ಯಾವೊಬ್ಬ ವ್ಯಕ್ತಿಯು,–

(ಎ) ಸಿಕ್ಕ ಮೀನಿನ ಬೆಲೆಯು ಒಂದು ಸಾವಿರ ರೂಪಾಯಿ, ಅಥವಾ ಅದಕ್ಕಿಂತ ಕಡಿಮೆಯಾಗಿದ್ದರೆ, ಐದು ಸಾವಿರ ರೂಪಾಯಿಗಳನ್ನು;

(ಬಿ) ಸಿಕ್ಕ ಮೀನಿನ ಬೆಲೆಯು ಒಂದು ಸಾವಿರ ರೂಪಾಯಿಗಿಂತ ಹೆಚ್ಚಾಗಿದ್ದರೆ, ಮೀನಿನ ಬೆಲೆಯ ಐದರಷ್ಟನ್ನು ; ಅಥವಾ

(ಸಿ) ಯಾವುದೇ ಮೀನನ್ನು ಒಳಗೊಂಡಿರದ ಇತರ ಯಾವುದೇ ವಿಷಯವಾಗಿರುವ ಸಂದರ್ಭದಲ್ಲಿ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಐದು ಸಾವಿರ ರೂಪಾಯಿಗಳನ್ನು,

– ಮೀರದಂಥ ದಂಡಕ್ಕೆ ಬದ್ಧನಾಗತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದಂಥ ಯಾವುದೇ ದಂಡದ ಜೊತೆಗೆ, ಮಧ್ಯಸ್ಥಗಾರನು,–

(ಎ) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ರೀತಿಯಲ್ಲಿ ಬಳಸಲಾಗಿರುವ ಅಥವಾ ಬಳಸಲು ಕಾರಣವಾಗಿದ್ದ ಅಥವಾ ಬಳಸಲು ಅವಕಾಶ ಮಾಡಿಕೊಟ್ಟಿದ್ದ ಅಥವಾ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿದ್ದ ಮೀನು ಹಿಡಿಯುವ ನೌಕೆಯ ನೋಂದಣಿ ಪ್ರಮಾಣಪತ್ರವನ್ನು,–

(i) ಸಂದರ್ಭಾನುಸಾರ, ರದ್ದು ಪಡಿಸತಕ್ಕದ್ದು ಅಥವಾ ಹಿಂತೆಗೆದುಕೊಳ್ಳತಕ್ಕದ್ದು ; ಅಥವಾ

(ii) ಮಧ್ಯಸ್ಥಗಾರನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ ನಿಲಂಬನಗೊಳಿಸತಕ್ಕದ್ದು; ಅಥವಾ

(ಬಿ) 11ನೇ ಪ್ರಕರಣದ ಅಡಿಯಲ್ಲಿ ಸಂದರ್ಭಾನುಸಾರ, ವಶಕ್ಕೆ ತೆಗೆದುಕೊಳ್ಳಲಾದ ಅಥವಾ ಅಭಿಗ್ರಹಿಸಲಾದ ಮೀನು ಹಿಡಿಯುವ ನೌಕೆಯನ್ನು ಅಥವಾ ಮೀನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು,

–ಎಂದು ನಿರ್ದೇಶಿಸಬಹುದು:

ಪರಂತು, ಅಂಥ ನೌಕೆಯ ಮಾಲೀಕ ಅಥವಾ ಆ ಬಗ್ಗೆ ಯಾವುದೇ ಹಕ್ಕನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯ ಅಹವಾಲನ್ನು ಕೇಳಿದ ತರುವಾಯ, ಮಾಲೀಕ ಅಥವಾ ಅಂಥ ವ್ಯಕ್ತಿಯು, ಅಂಥ ಅಪರಾಧ ಘಟಿಸುವುದನ್ನು ತಡೆಯುವಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದ್ದನೆಂದು ಮಧ್ಯಸ್ಥಗಾರನಿಗೆ ಮನದಟ್ಟಾದರೆ, (ಬಿ) ಖಂಡದ ಅಡಿಯಲ್ಲಿ ಯಾವುದೇ ಮೀನು ಹಿಡಿಯುವ ನೌಕೆಯನ್ನು ಅಭಿಗ್ರಹಿಸತಕ್ಕದ್ದಲ್ಲ.

**14. ಅಪೀಲು ವಿಚಾರಕ ಮಂಡಲಿಯ ರಚನೆ ಮತ್ತು ಅಪೀಲು ವಿಚಾರಕ ಮಂಡಲಿಗೆ ಅಪೀಲು ಸಲ್ಲಿಸುವುದು.**– (1) ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ಅಥವಾ ಹೆಚ್ಚಿನ ಅಪೀಲು ವಿಚಾರಕ ಮಂಡಲಿಯನ್ನು ರಚಿಸಬಹುದು.

(2) ಅಪೀಲು ವಿಚಾರಕ ಮಂಡಲಿಯು ಮೂವರು ಸದಸ್ಯರನ್ನೊಳಗೊಂಡಿದ್ದು, ಅವರ ಪೈಕಿ ಒಬ್ಬನು ಜಿಲ್ಲಾ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯಾಗಿದ್ದು, ಅವನು ಅಪೀಲು ವಿಚಾರಕ ಮಂಡಲಿಯ ಅಧ್ಯಕ್ಷನಾಗಿ ನೇಮಿತನಾಗತಕ್ಕದ್ದು.

(3) ಒಂದೇ ಒಂದು ಅಪೀಲು ವಿಚಾರಕ ಮಂಡಲಿಯನ್ನು ರಚಿಸಿರುವಲ್ಲಿ ಅಪೀಲು ವಿಚಾರಕ ಮಂಡಲಿಯು ರಾಜ್ಯಾದ್ಯಂತ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಒಂದಕ್ಕಿಂತ ಹೆಚ್ಚು ಅಪೀಲು ವಿಚಾರಕ ಮಂಡಲಿಗಳನ್ನು ರಚಿಸಿರುವಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅಂಥ ಪ್ರತಿಯೊಂದು ಅಪೀಲು ವಿಚಾರಕ ಮಂಡಲಿಯ ಅಧಿಕಾರ ವ್ಯಾಪ್ತಿಯನ್ನು ಪರಿಭಾಷಿಸಬಹುದು.

(4) ಮಧ್ಯಸ್ಥಗಾರನ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶ ಹೊರಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಂಥ ಅಪೀಲು ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಪೀಲು ವಿಚಾರಕ ಮಂಡಲಿಗೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಕಾಲದಲ್ಲಿ ಅಪೀಲು ಸಲ್ಲಿಸದಿರಲು ಸಾಕಷ್ಟು ಕಾರಣಗಳು ಇದ್ದುವೆಂದು ಅಪೀಲು ವಿಚಾರಕ ಮಂಡಲಿಗೆ ಮನದಟ್ಟಾದರೆ, ಅಪೀಲು ವಿಚಾರಕ ಮಂಡಲಿಯು 30 ದಿನಗಳ ಸದರಿ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಪೀಲನ್ನು ಸ್ವೀಕರಿಸಬಹುದು.

(5) ಅಪೀಲುದಾರನು, ಅಪೀಲು ಸಲ್ಲಿಸುವ ಕಾಲದಲ್ಲಿ, ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಮೇರೆಗೆ ಸಂದೇಯವಿರುವ ದಂಡ ರೂಪದ ಮೊಬಲಗನ್ನು ಠೇವಣಿ ಇಟ್ಟ ಹೊರತು, ಈ ಪ್ರಕರಣದ ಅಡಿಯಲ್ಲಿ ಯಾವುದೇ ಅಪೀಲನ್ನು ಸ್ವೀಕರಿಸತಕ್ಕದ್ದಲ್ಲ:

ಪರಂತು, ಅಪೀಲುದಾರನು ಈ ಸಂಬಂಧದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದ ಮೇಲೆ, ಈ ಉಪ-ಪ್ರಕರಣದ ಅಡಿಯಲ್ಲಿ ಇಡಬೇಕಾಗಿರುವ ಠೇವಣಿಯಿಂದ ಅಪೀಲುದಾರನಿಗೆ ಅನುಚಿತ ತೊಂದರೆಯಾಗಬಹುದೆಂದು ಅಪೀಲು ವಿಚಾರಕ ಮಂಡಲಿಯು ಅಭಿಪ್ರಾಯಪಟ್ಟರೆ, ಬೇಷರತ್ತಾಗಿ ಅಥವಾ ವಿಧಿಸಲು ಯುಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಲಿಖಿತ ಆದೇಶದ ಮೂಲಕ ಅಂಥ ಠೇವಣಿಯನ್ನು ಬಿಟ್ಟುಬಿಡತಕ್ಕದ್ದು.

(6) (4)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಅಪೀಲನ್ನು ಸ್ವೀಕರಿಸಿದ ಮೇಲೆ ಅಪೀಲು ವಿಚಾರಕ ಮಂಡಲಿಯು, ತಾನು ಯುಕ್ತವೆಂದು ಭಾವಿಸುವಂಥ ವಿಚಾರಣೆ ನಡೆಸಿದ ತರುವಾಯ, ಮತ್ತು ಸಂಬಂಧಪಟ್ಟ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ, ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ರದ್ದುಪಡಿಸಬಹುದು ಮತ್ತು ಅಪೀಲು ವಿಚಾರಕ ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು, ಮತ್ತು,-

(ಎ) (5)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡ ರೂಪದಲ್ಲಿ ಠೇವಣಿ ಇಡಲಾದ ಮೊತ್ತವು ಅಪೀಲು ವಿಚಾರಕ ಮಂಡಲಿಯಿಂದ ಸಂದಾಯ ಮಾಡಬೇಕೆಂದು ನಿರ್ದೇಶಿತವಾದ ದಂಡವನ್ನು ಮೀರಿದರೆ, ಆ ಹೆಚ್ಚುವರಿ ಮೊಬಲಗನ್ನು ; ಅಥವಾ

(ಬಿ) ಅಪೀಲು ವಿಚಾರಕ ಮಂಡಲಿಯು ದಂಡ ವಿಧಿಸುವ ಆದೇಶವನ್ನು ರದ್ದುಗೊಳಿಸಿದರೆ, ದಂಡ ರೂಪದಲ್ಲಿ ಠೇವಣಿ ಇಡಲಾದ ಪೂರ್ಣ ಮೊತ್ತವನ್ನು,

- ಅಪೀಲುದಾರನಿಗೆ ಮರುಪಾವತಿ ಮಾಡತಕ್ಕದ್ದು.

**15. ಅಪೀಲು ವಿಚಾರಕ ಮಂಡಲಿಯಿಂದ ಪರಿಷ್ಕರಣೆ.-** ಅಪೀಲು ವಿಚಾರಕ ಮಂಡಲಿಯು, ಆದೇಶದ ವಿಧಿಸಮ್ಮತತೆ ಅಥವಾ ಔಚಿತ್ಯತೆಯ ಬಗ್ಗೆ ಅಥವಾ ಅಂಥ ಕಾರ್ಯವಿಧಾನದ ನಿಯತತೆಯ ಬಗ್ಗೆ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ 14ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥಗಾರನು ಹೊರಡಿಸಿದ ಯಾವುದೇ ಆದೇಶದ ದಾಖಲೆಗಳನ್ನು ಮತ್ತು ಯಾವ ಆದೇಶದ ವಿರುದ್ಧ 15ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸಿಲ್ಲವೋ ಆ ಆದೇಶದ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಆ ಬಗ್ಗೆ ತಾನು ಯುಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು:

ಪರಂತು, ಅಂಥ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ಆ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು, ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**16. ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಗಾರರ ಮತ್ತು ಅಪೀಲು ವಿಚಾರಕ ಮಂಡಲಿಯ ಅಧಿಕಾರಗಳು.-** (1) ಮಧ್ಯಸ್ಥಗಾರ ಮತ್ತು ಅಪೀಲು ವಿಚಾರಕ ಮಂಡಲಿಯು, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸುವಾಗ, ಸಿವಿಲ್

ಪ್ರಕ್ರಿಯಾ ಸಂಹಿತೆ, 1908ರ (ಕೇಂದ್ರಾಧಿನಿಯಮ 1908ರ 5) ಅಡಿಯಲ್ಲಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿಗಳಿಗೆ ಸಮನು ನೀಡುವುದು ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಾಖಲೆಯನ್ನು ಪತ್ತೆ ಮಾಡುವುದು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಅದರ ಯಾವುದೇ ಸರ್ಕಾರಿ ದಾಖಲೆ ಅಥವಾ ಪ್ರತಿಗಾಗಿ ಕೋರುವುದು;

(ಡಿ) ಆಫಿಡವಿಟ್ಟುಗಳ ಮೇಲೆ ಸಾಕ್ಷ್ಯ ಸ್ವೀಕರಿಸುವುದು; ಮತ್ತು

(ಇ) ಸಾಕ್ಷಿದಾರರು ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಆದೇಶವನ್ನು ಹೊರಡಿಸುವುದು.

(2) ಮಧ್ಯಸ್ಥಗಾರ ಅಥವಾ ಅಪೀಲು ವಿಚಾರಕ ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸುವಾಗ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರಾಧಿನಿಯಮ 2) 345 ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಅದನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**17. ಸಲಹಾ ಸಮಿತಿ.**- ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಮೀನುಗಾರಿಕೆ ಇಲಾಖೆಯ ನಿರ್ದೇಶಕರು ಅಧ್ಯಕ್ಷರಾಗಿರುವ ಮತ್ತು ತಾನು ಅವಶ್ಯವೆಂದು ಪರಿಗಣಿಸುವಂಥ ಹದಿನೈದು ಮಂದಿಯನ್ನು ಮೀರದಂಥ ಇತರ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರುಗಳಿರುವ ಒಂದು ಸಲಹಾ ಸಮಿತಿಯನ್ನು ರಚಿಸಬಹುದು. ಸಲಹಾ ಸಮಿತಿಯು, ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಸಲಹೆ ನೀಡತಕ್ಕದ್ದು.

**18. ಕಂಪನಿಗಳಿಂದ ಉಲ್ಲಂಘನೆಗಳು.**- (1) ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಉಲ್ಲಂಘನೆಯನ್ನು ಒಂದು ಕಂಪನಿಯು ಮಾಡಿರುವಲ್ಲಿ, ಉಲ್ಲಂಘನೆಯು ಘಟಿಸಿದ ಕಾಲದಲ್ಲಿ ಆ ಕಂಪನಿಯ ವ್ಯವಹಾರಗಳ ನಿರ್ವಹಣೆಗಾಗಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಉಲ್ಲಂಘನೆಯ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವನು, ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರವಾದ ದಂಡನೆಗೆ ಬದ್ಧನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಉಲ್ಲಂಘನೆಯು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಉಲ್ಲಂಘನೆಯನ್ನು ತಡೆಗಟ್ಟಲು ತಾನು ಎಲ್ಲ ರೀತಿಯ ಯೋಗ್ಯ ಶ್ರದ್ಧೆಯನ್ನು ವಹಿಸಿದ್ದೆನೆಂದು ಅವನು ರುಜುವಾತು ಮಾಡಿದರೆ ಅಂಥ ಯಾವೊಬ್ಬ ವ್ಯಕ್ತಿಯನ್ನು ಯಾವುದೇ ದಂಡನೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಉಲ್ಲಂಘನೆಯು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಉಲ್ಲಂಘನೆಯ ದೋಷಿ ಎಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ತದನುಸಾರವಾದ ದಂಡನೆಗೆ ಬದ್ಧನಾಗತಕ್ಕದ್ದು.

***ವಿವರಣೆ.***- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

## ಅಧ್ಯಾಯ IV

### ಸಂಕೀರ್ಣ

**19**. **ವಿನಾಯಿತಿ.**- (1) ಈ ಅಧಿನಿಯಮದಲ್ಲಿ ಇರುವುದಾವುದೂ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಸರ್ಕಾರಿ ಉದ್ಯಮಕ್ಕೆ ಸೇರಿದ ಪರಿಶೀಲನೆ ನಡೆಸುವ ನೌಕೆಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ನಿರ್ದಿಷ್ಟ ಪ್ರದೇಶ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಮೀನು ಹಿಡಿಯುವುದಕ್ಕಾಗಿ ಬಳಸುವ ಮೀನು ಹಿಡಿಯುವ ನೌಕೆಗಳ ಯಾವುದೇ ವರ್ಗ ಅಥವಾ ವರ್ಗಗಳಿಗೆ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳನ್ನು ಅನ್ವಯಿಸುವುದು, ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ದಿಷ್ಟಪಡಿಸಬಹುದಾದಂಥ ನಿರ್ದಿಷ್ಟ ಪ್ರದೇಶ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಮೀನು ಹಿಡಿಯುವುದಕ್ಕೆ ಬಳಸುವ ಮೀನು ಹಿಡಿಯುವ ನೌಕೆಗಳ ಯಾವುದೇ ವರ್ಗ ಅಥವಾ ವರ್ಗಗಳನ್ನು, ತಾನು ಯುಕ್ತವೆಂದು ಭಾವಿಸುವಂಥ ಷರತ್ತುಗಳಿಗೆ ಒಳಪಟ್ಟು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂತೆ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧದ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು.

**20**. **ಅಧಿಕಾರಗಳ ಪ್ರತ್ಯಾಯೋಜನೆ.**- ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಗೆ ಪ್ರದತ್ತವಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು, ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ನಿರ್ದಿಷ್ಟಪಡಿಸಬಹುದಾದಂಥ ಇತರ ಅಧಿಕಾರಿಯು ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**21**. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**- (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಸರ್ಕಾರ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ಆದೇಶ ಅಥವಾ ನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ, ಸರ್ಕಾರ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**22**. **ನಿಯಮಗಳ ರಚನಾಧಿಕಾರ.**- (1) ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಲಾದ ಅಧಿಕಾರದ ಸಾಮಾನ್ಯತೆಗೆ ಬಾಧಕ ಬಾರದಂತೆ ಅಂಥ ನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶ ಹೊರಡಿಸುವಾಗ ಗಮನಿಸಬೇಕಾದಂಥ ವಿಷಯಗಳು;

(ಬಿ) 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಲೈಸೆನ್ಸಿಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ, ಅದು ಒಳಗೊಳ್ಳತಕ್ಕ ವಿವರಗಳು ಮತ್ತು ಅದರೊಂದಿಗೆ ಕಳುಹಿಸತಕ್ಕ ಶುಲ್ಕ;

(ಸಿ) 5ನೇ ಪ್ರಕರಣದ (4)ನೇ ಉಪ-ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಲೈಸೆನ್ಸ್ ನೀಡುವಲ್ಲಿ ಅಥವಾ ನಿರಾಕರಿಸುವಲ್ಲಿ ಗಮನಿಸತಕ್ಕ ವಿಷಯಗಳು, ಲೈಸೆನ್ಸಿಗಾಗಿ ಅಥವಾ ಅದರ ನವೀಕರಣಕ್ಕಾಗಿ ಸಂದೇಯವಿರುವ ಶುಲ್ಕ ಮತ್ತು ಲೈಸೆನ್ಸಿನ ಷರತ್ತುಗಳ ಯಥೋಚಿತ ಪಾಲನೆಗಾಗಿ ಭದ್ರತೆ;

(ಡಿ) 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ನೀಡುವುದಕ್ಕೆ ಅಥವಾ ನಿರಾಕರಿಸುವುದಕ್ಕೆ ಅಥವಾ ಅಂಥ ಲೈಸೆನ್ಸಿನ ರದ್ದಿಯಾತಿ, ಅಮಾನತು, ವ್ಯತ್ಯಾಸ ಅಥವಾ ತಿದ್ದುಪಡಿಗೆ ಅಥವಾ 8ನೇ ಪ್ರಕರಣದ ಅಡಿಯಲ್ಲಿ ನೌಕೆಯ ನೋಂದಣಿ ಅಥವಾ ಅಂಥ ನೋಂದಣಿಯನ್ನು ರದ್ದುಗೊಳಿಸಲು ಅನುಸರಿಸಬೇಕಾದ ಕಾರ್ಯ ವಿಧಾನ;

(ಇ) 8ನೇ ಪ್ರಕರಣದ ಅಡಿಯಲ್ಲಿ ನೌಕೆಯ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ, ಅಂಥ ಅರ್ಜಿಯಲ್ಲಿರಬೇಕಾದ ವಿವರಗಳು ಮತ್ತು ಅರ್ಜಿಯ ಜೊತೆಗಿರತಕ್ಕ ಶುಲ್ಕ, ನೋಂದಣಿ ಪ್ರಮಾಣ ಪತ್ರದ ನಮೂನೆ ಮತ್ತು ಆ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ರಿಜಿಸ್ಟರಿನ ನಮೂನೆ ಮತ್ತು ಆ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಗುರುತನ್ನು ಹಾಕಬೇಕಾದ ವಿಧಾನ-ಇವುಗಳನ್ನು ಪ್ರದರ್ಶಿಸತಕ್ಕದ್ದು;

(ಎಫ್) 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಪೀಲುಗಳನ್ನು ಹೂಡಬೇಕಾಗಿರುವ ಪ್ರಾಧಿಕಾರಿ;

(ಜಿ) 11ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ವಶಪಡಿಸಿಕೊಂಡಿರುವ ನೌಕೆಯನ್ನು ಇರಿಸತಕ್ಕ ಸ್ಥಳ ಮತ್ತು ವಿಧಾನ ಮತ್ತು ಆ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ಅಭಿಗ್ರಹಿಸಲಾದ ಮೀನನ್ನು ವಿಲೆ ಮಾಡುವುದರಿಂದ ಬಂದ ಉತ್ಪತ್ತಿಯನ್ನು ಮಧ್ಯಸ್ಥಗಾರನ ಬಳಿ ಠೇವಣಿ ಇಡತಕ್ಕ ವಿಧಾನ;

(ಎಚ್) 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಮಧ್ಯಸ್ಥಗಾರನಿಂದಾಗುವ ವಿಚಾರಣಾ ಕಾರ್ಯ ವಿಧಾನ;

(ಐ) ಅಧ್ಯಕ್ಷನಲ್ಲದ ಅಪೀಲು ವಿಚಾರಕ ಮಂಡಲಿಯ ಸದಸ್ಯರ ಅರ್ಹತೆಗಳು, ಅಪೀಲು ವಿಚಾರಕ ಮಂಡಲಿಯ ಅಧ್ಯಕ್ಷ ಹಾಗೂ ಇತರ ಸದಸ್ಯರಿಗೆ ಸಂದೇಯವಿರುವ ಶುಲ್ಕ ಹಾಗೂ ಭತ್ಯಗಳು ಮತ್ತು ಅಪೀಲು ವಿಚಾರಕ ಮಂಡಲಿಯ ಕಾರ್ಯವಿಧಾನ;

(ಜೆ) ದಸ್ತಾವೇಜುಗಳ ಅಥವಾ ಆದೇಶಗಳ ಪ್ರತಿಗಳನ್ನು ಒದಗಿಸುವುದಕ್ಕಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಸಂದೇಯವಿರುವ ಶುಲ್ಕ ಅಥವಾ ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರವು ಸಲ್ಲಿಸುವ ಯಾವುದೇ ಸೇವೆಯಲ್ಲಿ ಒಳಗೊಂಡ ವಿಷಯ;

(ಕೆ) ಈ ಅಧಿನಿಯಮದ ಅಡಿಯಲ್ಲಿ ನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ತರುವಾಯ, ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ ಸಾಧ್ಯವಾದಷ್ಟೂ ಬೇಗನೆ ಅದರ ಮುಂದೆ ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ನಿಕಟೋತ್ತರದ ಅಧಿವೇಶನದಲ್ಲಿ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ತದನಂತರ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಅಧಿಸೂಚಿತವಾದ ದಿನಾಂಕದಿಂದ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ಅಥವಾ ರದ್ದಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ

ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ವಿಷಯದ ವಿಧಿ ಮಾನ್ಯತೆಗೆ ಪ್ರತಿಕೂಲವಾಗಿರತಕ್ಕದ್ದಲ್ಲ.

* * * *